


# VOICE OF VIDYASHALA ALUMNI

## NEWS-LETTER OF THE OLD BOYS' ASSOCIATION OF SRI RAMAKRISHNA VIDYASHALA, MYSORE

BI-ANNUAL JULY - DECEMBER 2011 Vol. XVIII, No.2

## ಶ್ರೀ ರಾಮಕೃಷ್ಣ ಸ್ಟೂಡೆಂಟ್ಸ್ ಹೋಂ – ಒಂದು ಸವಿ ನೆನಪು



*1950 ರಲ್ಲಿ ವಿದ್ಯಾರ್ಥಿನಿಲಯ*

1892 ಸ್ವಾಮಿ ವಿವೇಕಾನಂದರು ಮೈಸೂರಿಗೆ ಭೇಟಿ ನೀಡಿದ ವರ್ಷ. ಮಹತ್ವದ ಈ ಘಟನೆಯ ನಂತರ ಸ್ವಾಮೀಜಿಯವರ ಕಲ್ಪನೆಯ ಸಂಘಟನೆಗೆ (ಶ್ರೀ ರಾಮಕೃಷ್ಣ ಮಹಾ ಸಂಘ) ಮೈಸೂರಿನಲ್ಲಿ ಭದ್ರ ನೆಲೆ ದೊರಕುವುದು ಮತ್ತು ಅದಕ್ಕೆ ಉಜ್ವಲ ಭವಿಷ್ಯವಿರುವುದು ಅವರ ಅನನ್ಯ ದೂರ ದೃಷ್ಟಿಗೆ ಗೋಚರವಾದದ್ದನ್ನು ಅವರ ಪತ್ರಗಳು ಸಾರಿ ಹೇಳಿವೆ.

1925ರಲ್ಲಿ ಶ್ರೀ ರಾಮಕೃಷ್ಣ ಮಹಾಸಂಘದ ಮೈಸೂರು ಕೇಂದ್ರದ ಸ್ಥಾಪನೆಯಾಯಿತು. ಸ್ವಾಮಿ ಸಿದ್ಧೇಶ್ವರಾನಂದರು ಪ್ರಥಮ ಅಧ್ಯಕ್ಷರಾದರು.

ಸ್ವಾಮಿ ವಿವೇಕಾನಂದರ ಆಧ್ಯಾತ್ಮ ಸಾಹಿತ್ಯದ ಸೆಳೆತಕ್ಕೆ ಸಿಕ್ಕಿದ ಕುವೆಂಪು ಅವರಿಗೆ ಮೈಸೂರು ಆಶ್ರಮದ ಒಡನಾಟವೂ ಹೆಚ್ಚಾಗುತ್ತಿತ್ತು. ಒಂದು ಅಪೂರ್ವ ಘಟನೆಯ ಪರಿಣಾಮವಾಗಿ ಕುವೆಂಪು ಅವರು ಆಶ್ರಮದ ನಿವಾಸಿಗಳಾಗಿ ಸ್ವಾಮಿ ಸಿದ್ಧೇಶ್ವರಾನಂದರ ನೆರಳಲ್ಲಿ ಬದುಕುವ ಸಂದರ್ಭ ಒದಗಿ ಬಂತು. ಕುವೆಂಪು ಅವರ ಭಾವ ಮೈದುನ ದೇವಂಗಿ ಮಾನಪ್ಪಗೌಡರಿಗೂ ಆಶ್ರಮದ ಸಂಪರ್ಕ ಒದಗಿ ಸ್ವಾಮಿ ಸಿದ್ಧೇಶ್ವರಾನಂದರ ಆತ್ಮೀಯರಾಗಿಬಿಟ್ಟರು.



*ಸ್ವಾಮಿ ಸಿದ್ಧೇಶ್ವರಾನಂದ*

1929 ಸ್ವಾಮಿ ಸಿದ್ಧೇಶ್ವರಾನಂದರೊಂದಿಗೆ ಕುವೆಂಪು ಮತ್ತು ಮಾನಪ್ಪನವರು ಬೇಲೂರು ಮಠಕ್ಕೆ ಭೇಟಿ ನೀಡಿ, ಸ್ವಾಮಿ ಶಿವಾನಂದರಿಂದ ದೀಕ್ಷೆ ಪಡೆದು, ಮೈಸೂರಿಗೆ ಮರಳಿ ಬರುತ್ತಿದ್ದಾಗ, ದೇಶದ ನಾನಾ ಆಗು ಹೋಗುಗಳ ಬಗ್ಗೆ ಚರ್ಚೆ ಮಾಡುತ್ತಲೇ, ಮಾನಪ್ಪನವರು ಸ್ವಾಮಿ ಸಿದ್ದೇಶ್ವರಾನಂದರೊಂದಿಗೆ, ಮಲೆನಾಡಿನ ಹುಡುಗರಿಗೆ ಮೈಸೂರಿನಲ್ಲಿ ಯಾವುದೇ ವಿದ್ಯಾರ್ಥಿನಿಲಯ ಇಲ್ಲದಿರುವುದರಿಂದ, ಒಂದು ವಿದ್ಯಾರ್ಥಿನಿಲಯ ಸ್ಥಾಪನೆ ಮಾಡಬೇಕೆಂದು ಒತ್ತಾಯಿಸಿದರು. ಕುವೆಂಪು ಅನುಮೋದಿಸಿದರು. ಸ್ವಾಮೀಜಿ ಒಂದು ಬಾಡಿಗೆ ಮನೆ ಪಡೆದು ವಿದ್ಯಾರ್ಥಿನಿಲಯ ಸ್ಥಾಪಿಸುವುದಾಗಿ ಭರವಸೆ ಇತ್ತರು.

1932ರಲ್ಲಿ ವೀವರ್ಸ್ ಲೇನ್ ನಲ್ಲಿ (ಕೃಷ್ಣಮೂರ್ತಿಪುರಂ) ಒಂದು ಬಾಡಿಗೆ ಮನೆಯಲ್ಲಿ ವಿದ್ಯಾರ್ಥಿನಿಲಯ ಪ್ರಾರಂಭವಾಯಿತು. ಕುವೆಂಪು ಅವರ ಸಲಹೆಯಂತೆ ವಿದ್ಯಾರ್ಥಿನಿಲಯಕ್ಕೆ ಪಾತ್ರೆಗಳನ್ನು ದೇವಂಗಿಯ ಇಂಗ್ಲಾದಿ ಮನೆಯಿಂದ ಮಾನಪ್ಪನವರು ತಂದರು. ಹಾಗೆಯೇ ಪ್ರಥಮ ವರ್ಷದ ವಿದ್ಯಾರ್ಥಿಗಳಾಗಿ ದೇವಂಗಿಯ ಡಿ.ಆರ್.ವಿಜಯದೇವ್, ಡಿ.ಟಿ.ಚಂದ್ರಶೇಖರ್, ಡಿ.ಎನ್. ಶ್ರೀನಿವಾಸ್, ವಾಟಗಾರು ವೆಂಕಟಪ್ಪ ಹೆಚ್. ಎಮ್. ಶ್ರೀಕಂಠ, ಹೊಸಮನೆ, ಅರಮನೆಕೇರಿ ರಾಮಣ್ಣ ಮೊದಲಾದವರು ಸೇರಿದರು. ಮಾರನೇ ವರ್ಷ ಕೊಳಾವರದ ಕೆ.ಟಿ.ಕೃಷ್ಣಪ್ಪ, ಡಿ.ಟಿ.ನಾಗೇಶ್ ವಿದ್ಯಾರ್ಥಿನಿಲಯ ಸೇರಿದರು. ಮುಂದಿನ ವರ್ಷಗಳಲ್ಲಿ ಮಲೆನಾಡಲ್ಲದೆ, ನಾಡಿನ ಎಲ್ಲೆಡೆಯಿಂದ ಬಂದ ವಿದ್ಯಾರ್ಥಿಗಳಿಗೆ ನಿಲಯದಲ್ಲಿ ಆಶ್ರಯ ದೊರೆಯಿತು. ಆ ವರ್ಷದ ವಿದ್ಯಾರ್ಥಿನಿಲಯದ ವರದಿ ಹೀಗಿದೆ.



K V Puttappa

*"In June 1932, through the munificence of three friends, Sri Ramakrishna students' Home was started with 14 fourteen pay boarders in a building close to the Ashrama. The number has since increased to 17. Every care is taken to see that the students learn uprightness of conduct and dignity of labour. Their physical and intellectual growth is attended to and a religious class is taken for them. They have a debating society and a students' garden. The Home has already become popular".*



Devangi Manappa

ವೀವರ್ಸ್ ಲೇನಿನ ಮನೆಯ ನಂತರ ರಮಾ ವಿಲಾಸ ಅಗ್ರಹಾರದ ಒಂದು ಮನೆಯಲ್ಲಿ ಕೆಲಕಾಲ ವಿದ್ಯಾರ್ಥಿನಿಲಯ ನಡೆಸಲಾಯಿತು. ಆ ಸಮಯದಲ್ಲಿ ಆಶ್ರಮದ ಹಿಂಬಾಗದ ರಸ್ತೆಯಲ್ಲಿ ವಕೀಲರಾಗಿದ್ದ ರಂಗಾಚಾರ್ ವಾಸಿಸುತ್ತಿದ್ದರು. ಸರಳಜೀವಿ, ಪರೋಪಕಾರಿಗಳಾಗಿದ್ದ ರಂಗಾಚಾರ್ಯರು ಆಶ್ರಮದವರು ವಿದ್ಯಾರ್ಥಿಗಳಿಗಾಗಿ ಹಾಸ್ಟೆಲ್ ನಡೆಸಲು ಸಂಕಲ್ಪಿಸಿದ್ದಾರೆ ಎಂಬುದನ್ನು ಕೇಳಿ ಆಗತಾನೆ ಕಟ್ಟಿದ್ದ ತಮ್ಮ ಮನೆಯನ್ನೇ ಉಚಿತವಾಗಿ ಕೊಡಲು ಮುಂದೆ ಬಂದರು. ಅವರಿಗೆ ಆ ಸಮಯದಲ್ಲಿ ತಮಗೆ ಇಳಿದುಕೊಳ್ಳುವುದಕ್ಕೆ ಸ್ಥಳವಿರಲಿಲ್ಲ. ಆದರೆ ತಾವು ಬಾಡಿಗೆ ಮನೆಗೆ ಹೋಗಿ ತಮ್ಮ ಮನೆಯನ್ನೇ ಹಾಸ್ಟೆಲ್‌ಗಾಗಿ ಬಿಟ್ಟುಕೊಟ್ಟರು. ಅದು ಒಂದು ಹಾರಿನ ಮಂಗಳೂರು ಹೆಂಚಿನ ಮಹಡಿ ಮನೆ. ಅದರಿಲ್ಲಿದ್ದದ್ದು ಮೂರು ದೊಡ್ಡ ಕೋಣೆಗಳು, ಮೇಲೆರಡು, ಕೆಳಗೆ ಒಂದು, ವೆರಾಂಡದ ಕೋಣೆಯೂ ಸೇರಿ ನಾಲ್ಕು ಚಿಕ್ಕ ಕೋಣೆಗಳು. ಮಹಡಿ ಮೆಟ್ಟಲ ಬಳಿಯ ಕೋಣೆ ವಾರ್ಡನ್ ಸ್ವಾಮಿಗಳದು. ಮತ್ತೊಂದು ಅಡುಗೆಯ ಮನೆ. ವರಾಂಡದ ಕೋಣೆ ದೇವರ ಮನೆ. ವರಾಂಡವೇ ಭೋಜನ ಶಾಲೆ. ಸ್ನಾನ ಗೃಹ ಮತ್ತು ಶೌಚಾಲಯಗಳು ಕಟ್ಟಡಕ್ಕೆ ಸೇರಿದಂತೆ ಹೊರಗಡೆಗಿದ್ದವು.



Students' Home at Vontikoppl

ಸ್ವಾಮಿ ಶಾಂಭವಾನಂದರು ಆಶ್ರಮದ ಅಧ್ಯಕ್ಷರಾದ ನಂತರ ವಿದ್ಯಾರ್ಥಿಗಳನ್ನು ಪರಿಪೂರ್ಣ ವ್ಯಕ್ತಿಗಳನ್ನಾಗಿ, ಪುರುಷಸಿಂಹರನ್ನಾಗಿ ರೂಪಿಸುವ ಕನಸಿಗೆ ಮತ್ತೊಂದು ಆಯಾಮ ದೊರೆಯಿತು. ಈ ಕನಸು ನನಸಾಗಬೇಕಾದರೆ ತಮ್ಮದೇ ವಸತಿ ಶಾಲೆಯಿದ್ದು, ದಿನವಿಡೀ ವಿದ್ಯಾರ್ಥಿಗಳು ತಮ್ಮ ತೆಕ್ಕೆಯಲ್ಲೇ ಇರಬೇಕೆಂಬ ಅರಿವಿನೊಂದಿಗೆ ಶಾಲೆಗಾಗಿ ಕಟ್ಟಡದ ಕೆಲಸ 1947 ರಲ್ಲಿ ಪ್ರಾರಂಭವಾಯಿತು. ಕಟ್ಟಡದ ಸ್ವಲ್ಪ ಭಾಗ ಪೂರ್ಣವಾದಂತೆ ವಿದ್ಯಾರ್ಥಿನಿಲಯ ಹೊಸ ಕಟ್ಟಡಕ್ಕೆ (NEW HOSTEL) ಸ್ಥಳಾಂತರವಾಯಿತು.

1932ರಿಂದ 1953ರ ವಿದ್ಯಾರ್ಥಿನಿಲಯದ ಮಹತ್ವಪೂರ್ಣ ವರ್ಷಗಳ ಅವಧಿಯಲ್ಲಿ ಆಶ್ರಮದ ಅಧ್ಯಕ್ಷರುಗಳಾಗಿದ್ದವರು ಸ್ವಾಮಿ ಸಿದ್ಧೇಶ್ವರಾನಂದರು, ಸ್ವಾಮಿ ದೇಶಿಕಾನಂದರು, ಸ್ವಾಮಿ ಪ್ರಣವೇಶಾನಂದರು, ಮತ್ತು ಸ್ವಾಮಿ ಶಾಂಭವಾನಂದರು, ವಿದ್ಯಾರ್ಥಿನಿಲಯದ ಪಾಲಕಗರಾಗಿದ್ದವರು (Warden) ಸ್ವಾಮಿ ಸಿದ್ಧೇಶ್ವರಾನಂದರು, ಸ್ವಾಮಿ ಋತಾತ್ಮಾನಂದರು (ಕುಟ್ಟಪ್ಪ ಮಹಾರಾಜ್), ಸ್ವಾಮಿ ಪದ್ಮನಾಭಾನಂದರು ಮತ್ತು ಸ್ವಾಮಿ ವೇದಾನಂದರು. ಅಡಿಗೆಯ ಮೇಲ್ವಿಚಾರಣೆ ಹೊತ್ತಿದ್ದವರು ಮೊದಲು ಕೇಶವ, ನಂತರ ಕೃಷ್ಣ ಮತ್ತು ವಾಸು ( ಕೃಷ್ಣ ಮೊದಲೇ ಆಶ್ರಮದ ಅಡಿಗೆಯ ಉಸ್ತುವಾರಿ ಹೊತ್ತಿದ್ದರು ).

ಶ್ರೀ ರಾಮಕೃಷ್ಣ ವಿದ್ಯಾರ್ಥಿನಿಲಯದಲ್ಲಿ ತಮ್ಮ ಬಾಲ್ಯದ ದಿನಗಳನ್ನು ಕಳೆದವರು. ತಮ್ಮ ವ್ಯಕ್ತಿತ್ವಗಳಿಗೆ ಬಳುವಳಿಯಾಗಿ ಬಂದ ಶಿಸ್ತು ಕಾರ್ಯತತ್ಪರತೆ, ಜೀವನದರ್ಶಿ ಮೌಲ್ಯಗಳಿಂದ ತಮ್ಮ ತಮ್ಮ ಕಾರ್ಯಕ್ಷೇತ್ರಗಳಲ್ಲಿ ವಿಭಿನ್ನ ಛಾಪು ಮೂಡಿಸಿದ್ದಾರೆ. ಹಲವರು ಸಮಾಜದ ಉನ್ನತ ಸ್ಥಾನಗಳಿಗೇರಿದ್ದಾರೆ. ನಮ್ಮ ಸಂಪರ್ಕಕ್ಕೆ ಸಿಕ್ಕಿದ ಹಿರಿಯರೆಲ್ಲರೂ ತಮ್ಮ ವಿದ್ಯಾರ್ಥಿನಿಲಯದ ದಿನಗಳನ್ನು ಭಾವುಕರಾಗಿ ನೆನೆಯುತ್ತಾರೆ. ನಿಲಯಪಾಲಕರಾಗಿದ್ದ ಸ್ವಾಮೀಜಿಯವರುಗಳ ಮಾತೃ ವಾತ್ಸಲ್ಯಕ್ಕೆ, ಸರಳ ಆದರ್ಶಮಯ ಜೀವನದ ಮೇಲ್ಪಂಕ್ತಿಗೆ ಗೌರವಪೂರ್ವಕವಾಗಿ ನಮಿಸುತ್ತಾರೆ. ಅಡಿಗೆ ಕೃಷ್ಣ ಅವರ ಪಾಕಪ್ರಾವಿಣ್ಯತೆಯೊಂದಿಗೆ ಅವರ ಸರಳ ಪ್ರೇಮಮಯ ಪ್ರೋತ್ಸಾಹ ನೆನೆಯುತ್ತಾರೆ.

ವಿದ್ಯಾಶಾಲೆ ಶೈಕ್ಷಣಿಕ ಕ್ಷೇತ್ರದ ಮಿನುಗುತಾರೆಯಾಗಿ ಪ್ರಕಾಶಿಸುತ್ತಿದೆ. ಅಂತಹ ಶಾಲೆಯ ಕಲ್ಪನೆಗೆ ಬುನಾದಿ ಅದರ ಪೂರ್ವಜ ಸಂಸ್ಥೆ 'ಸ್ಟೂಡೆಂಟ್ಸ್ ಹೋಮ್' ಅನ್ನುವುದು ಹೆಮ್ಮೆಯ ವಿಷಯ. ಈ ವಿದ್ಯಾರ್ಥಿ ನಿಲಯದ 21 ವರ್ಷಗಳ ಪುಟಗಳನ್ನು ಒಳಹೊಕ್ಕಿ ಅವಲೋಕಿಸುವುದೇ ಒಂದು ರೋಮಾಂಚಕಾರಿ ಅನುಭವ. ನಿಲಯದ ನಿವಾಸಿಗಳಾಗಿದ್ದ ಹಿರಿಯರನ್ನು ಸಂದರ್ಶಿಸುವುದರ ಮೂಲಕ ಈ ರೋಮಾಂಚನವನ್ನು ಎಲ್ಲರಿಗೂ ಹಂಚುತ್ತಿದ್ದೇವೆ.



## Hostel I batch

*STANDING* :

1. Devangi Srinivas
2. Aramanekeri Ramanna

*(rest of the names not available)*

*Sitting* :

1. K V Puttappa
2. Swami Eshwaranandaji
3. Swami Sharvanandaji
4. Swami Siddeshwaranandaji
5. Swami Ritatmanandaji

*Sqatting* :

1. Vatagaru Venkatappa
2. Devangi Vijaya Dev
3. H M Srikanta
4. Devangi Chandrashekar

*(rest of the names not available)*

एस. एम. कृष्णा
S. M. KRISHNA

विदेश मंत्री, भारत
MINISTER OF EXTERNAL AFFAIRS
INDIA



**Message**

*It gives me immense pleasure to note that the erstwhile Ramakrishna Students' Home, wherin I stayed as a hosteller, in my early days of education turns 80 years this year. I am, indeed, happy and have been watching with a sense of pride the growth of this august institution from a Students' Home to a Residential High school and to a Residential Pre-University College as it stands today.*

*The sweet memories of my stay in this institute are still fresh and vivid, despite passage of so many years. I participated in the Golden Jubilee Celebrations of the institute in 2004 with nostalgia.*

*I remember Swami Vedanandaji and Swami Shambhavanandaji with great respect and admiration for all the efforts they had put in building men of character in this institution. Countless stories that Swami Vedanandaji used to narrate to us about Sri Ramakrishna Paramahamsa and his spiritualism, Swami Vivekananda and his dynamism and Sri Sarada Mathe and her compassion, her love as well as the discourses about national struggle have always been an inspiration to all of us.*

*When we joined the institution the foundation for the building was just being laid. I am delighted that I was part of the construction of this building during those days. This institution has grown as an embodiment of Swami Shambhavanandaji's vision.*

*Today if I have become something in the society, I owe every bit of that to this great institution. I am happy to note that though several changes have taken place in the infrastructure and programmes of the institute, character building education continues to be the core of its objectives as envisioned by Swami Vivekananda.*

*I wish all those who are part of this great tradition the strength to serve mankind. I also wish the institute all success in all its endeavors.*

**(S.M. Krishna)**

Office : 172, South Block, New Delhi-110011 Tel : 23011127, 23011165 Fax : 23011463

# ನಿಲಯದ ಹಳೆಯ ವಿದ್ಯಾರ್ಥಿಗಳೊಡನೆ ಸಂದರ್ಶನಗಳು

**ಪಿ. ಎಂ. ಚಿಕ್ಕಬೋರಯ್ಯ, ಮಾಜಿ ಶಾಸಕರು, ಸಂಸ್ಥಾಪಕರು, ವಿದ್ಯಾವರ್ಧಕ ಸಂಸ್ಥೆಗಳು**



*ಪಿ. ಎಂ. ಚಿಕ್ಕಬೋರಯ್ಯ*

ಮೈಸೂರು ನಗರ ಹೆಮ್ಮೆಪಟ್ಟುಕೊಳ್ಳಬಹುದಾದ ಹಿರಿಯ ಚೇತನಗಳಲ್ಲೊಬ್ಬರಾದ ಪಿ. ಎಂ. ಚಿಕ್ಕಬೋರಯ್ಯನವರು, ಶ್ರೀ ರಾಮಕೃಷ್ಣ ಆಶ್ರಮದ ಸಂಪರ್ಕಕ್ಕೆ ಬಂದು ಅಲ್ಲಿಯ ನಿವಾಸಿಗಳಾಗಿದ್ದ ದಿನಗಳ ಅನುಭವಗಳಿಗಾಗಿ ಅವರನ್ನು ಭೇಟಿ ಮಾಡಬೇಕಾಗಿ ಬಂದದ್ದು ನಮಗೊಂದು ಮಧುರ ಅನುಭವವಾಯಿತು.

ಆಶ್ರಮದ ದಿನಗಳ ಪ್ರಸ್ತಾಪವಾದ ಕೂಡಲೇ 91ರ ಹರೆಯದ ಚಿಕ್ಕಬೋರಯ್ಯನವರು ಉತ್ಸಾಹದಿಂದ ಪುಟಿದೆದ್ದರು. ಅವರ ಸ್ಮೃತಿಪಟಲದಲ್ಲಿ ಮೊದಲು ಸುಳಿದ ಹೆಸರು ಸ್ವಾಮಿ ಸೋಮನಾಥಾನಂದರದು. ಮೈಸೂರು ನಗರದ ವರ್ತುಲದಲ್ಲಿದ್ದ, ಅವಿದ್ಯಾವಂತರೇ ಹೆಚ್ಚಾಗಿದ್ದ ಪಡುವಾರಹಳ್ಳಿ, ಹಾಗೂ ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಹಿಂದುಳಿದಿದ್ದ ಆದಿಕರ್ನಾಟಕ ಪುರದ ಜನರ ಮೇಲೆ ಸ್ವಾಮೀಜಿಯವರ ಅನುಕಂಪದ ದೃಷ್ಟಿ ಬಿದ್ದಿತು. ಇಲ್ಲಿಯ ಜನರಿಗೆ ಶಿಕ್ಷಣದ ವ್ಯವಸ್ಥೆ ಮಾಡಲು ಹೊರಟಾಗ ಸಹಕರಿಸಲು ಹಿಂದೇಟು ಹಾಕಿದ ಕೆಲವು ಶಿಕ್ಷಕರಿಗೆ ಛೀಮಾರಿ ಹಾಕಿದ್ದು ಆಯಿತು. ಈ ಸಮುದಾಯ ಉದ್ಧಾರಕ್ಕಾಗಿ "VILLAGE UPLIFTMENT SOCIETY" ಯನ್ನು ಪ್ರಾರಂಭಿಸಿದ್ದರು. ಬನುಮಯ್ಯ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರಾಗಿದ್ದ ಶೇಷಗಿರಿರಾಯರು ಈ ಸಂಸ್ಥೆಯ ಕಾರ್ಯದರ್ಶಿಗಳಾಗಿದ್ದರು. ಎಂಬ ವಿಷಯಗಳನ್ನು ಕೃತಜ್ಞತೆಯಿಂದ ನೆನೆಸಿಕೊಂಡರು.

ಪಡುವಾರಹಳ್ಳಿಯ ವಿದ್ಯಾಭ್ಯಾಸ ವಂಚಿತ ಕಿಶೋರರಲ್ಲಿ ಸ್ವಾಮಿ ಸೋಮನಾಥಾನಂದರ ಕಣ್ಣಿಗೆ ಬಿದ್ದದ್ದು ಭರವಸೆಯ ಹುಡುಗ ಚಿಕ್ಕಬೋರಯ್ಯನವರು. ಸ್ವಾಮಿ ಸಿದ್ಧೇಶ್ವರಾನಂದರು ಕುವೆಂಪು ಅವರನ್ನು ಕರೆತಂದು ಆಶ್ರಮದಲ್ಲಿ ನೆಲೆಸುವಂತೆ ಮಾಡಿದ ಹಾಗೆಯೇ ಸ್ವಾಮಿ ಸೋಮನಾಥಾನಂದರು 12 ವರ್ಷದ ಚಿಕ್ಕಬೋರಯ್ಯನವರನ್ನು ಆಶ್ರಮಕ್ಕೆ ಸೆಳೆತಂದರು. ಮುಂದಿನ 11 ವರ್ಷಗಳಲ್ಲಿ ಚಿಕ್ಕಬೋರಯ್ಯನವರಿಗೆ, ಸ್ವಾಮೀಜಿಯವರುಗಳ ಸಂಪರ್ಕ, ಆಶ್ರಮದ ಶಿಸ್ತಿನ ಸಕಾರಾತ್ಮಕ ವಾತಾವರಣದಲ್ಲಿ ಅರಳುವ ಅವಕಾಶದೊಂದಿಗೆ, ಕುವೆಂಪು ಅವರ ಒಡನಾಟವೂ ದೊರಕಿತು. ಕುವೆಂಪು ಅವರ ಅನನ್ಯ ಏಕಾಗ್ರತೆ ಮತ್ತು ಕರ್ತವ್ಯ ನಿಷ್ಠೆಗಳು ಇವರ ಮನಸೂರೆಗೊಂಡವು.

ಪ್ರಾರಂಭದ ವರ್ಷಗಳಲ್ಲಿ ಆಶ್ರಮದಲ್ಲಿ ಏನೂ ಉತ್ಪತ್ತಿ ಇಲ್ಲದೆ, ಆರ್ಥಿಕವಾಗಿ ಸಬಲವಾಗಿರಲಿಲ್ಲ. ಆಶ್ರಮಕ್ಕಾಗಿ ಅವರು ವಾರದಲ್ಲೊಂದು ದಿನ ಸಂತೇಪೇಟೆಯಿಂದ ಅಕ್ಕಿ ಬೇಳೆ ಭಿಕ್ಷೆ ಪಡೆದು ತರಬೇಕಾಗಿತ್ತು. ಬೇಡಿ ತಂದು ಸಂಸ್ಥೆ ಕಟ್ಟುವ ಇಲ್ಲಿನ ಪಾಠ ಮುಂದೆ ಅವರು ಪ್ರಾರಂಭಿಸಿದ ಹಲವಾರು ವಿದ್ಯಾರ್ಥಿನಿಲಯಗಳು ಮತ್ತು ವಿದ್ಯಾಸಂಸ್ಥೆಗಳ ಸಮರ್ಥ ನಿರ್ವಹಣೆಯಲ್ಲಿ ನೆರವಾಯಿತು.

ಮುಂದಿನ ವರ್ಷಗಳಲ್ಲಿ ಹೆಚ್. ಸಿ. ದಾಸಪ್ಪನವರ ಸಂಪರ್ಕದೊಂದಿಗೆ ಸ್ವಾತಂತ್ರ್ಯ ಹೋರಾಟದಲ್ಲೂ ಪಾಲ್ಗೊಂಡ ಚಿಕ್ಕಬೋರಯ್ಯನವರು, ಮದ್ರಾಸ್ ಮತ್ತು ಬೆಂಗಳೂರಿನಲ್ಲಿ ವಕೀಲ ವ್ಯಾಸಂಗ ಮಾಡಿ ಮೈಸೂರಿನ ಯಶಸ್ವೀ ವಕೀಲರಲ್ಲೊಬ್ಬರಾದರು. ವಿದ್ಯಾಶಾಲೆಯ ಪ್ರಾರಂಭದ ವರ್ಷಗಳಲ್ಲಿ ಶಾಲೆಯ ಕಾನೂನು ಸಲಹೆಗಾರರಾಗಿಯೂ ಸೇವೆ ಸಲ್ಲಿಸಿದ್ದಾರೆ.

ಆಶ್ರಮದಲ್ಲಿ ಕಳೆದ ದಿನಗಳ ಪ್ರಭಾವದಿಂದಾಗಿ ಅವರು ಮಾನವೀಯ ಮೌಲ್ಯಗಳ ಧುರೀಣರಾಗಿ (ಒಮ್ಮೆ ಶಾಸಕರಾಗಿ) ಎಲ್ಲರ ಗೌರವಕ್ಕೆ ಪಾತ್ರರಾಗಿದ್ದಾರೆ. ಅವರ ಈ ಸಾಧನೆಗಳನ್ನು ಗುರುತಿಸಿಯೇ ರಾಜ್ಯ ಸರ್ಕಾರ ಈ ಬಾರಿಯ ರಾಜ್ಯೋತ್ಸವ ಪ್ರಶಸ್ತಿ ನೀಡಿತು.

ವಿದ್ಯಾಶಾಲೆಯ ಹಿರಿಯ ವಿದ್ಯಾರ್ಥಿ ವೃಂದಕ್ಕೆ ಮತ್ತು ಇಂದಿನ ವಿದ್ಯಾರ್ಥಿಗಳಿಗಾಗಿ ಅವರ ಸಂದೇಶ ಕೋರಿದಾಗ, ಚಿಕ್ಕಬೋರಯ್ಯನವರು, ಶ್ರಮಜೀವಿಗಳಾಗಿ ಬದುಕಲು, ಬಡವರಿಗೆ ಆಶ್ರಯ ನೀಡಲು ಮತ್ತು ಮೇಲು ಕೀಳೆಂಬ ಭಾವನೆಯಿಂದ ಹೊರಬಂದು ಯಾರನ್ನೂ ಕೀಳಾಗಿ ನೋಡದಿರಲು ಕರೆ ನೀಡಿದರು.

[ವಿದ್ಯಾರ್ಥಿ ಮಂದಿರ ಪ್ರಾರಂಭಗೊಳ್ಳುವುದಕ್ಕೂ ಮುನ್ನ ಆಶ್ರಮದಲ್ಲೇ ನಿವಾಸಿಗಳಾಗಿದ್ದು ಕುವೆಂಪುರವರ ಒಡನಾಟದೊಂದಿಗೆ ವ್ಯಾಸಂಗ ಮಾಡಿದ ಶ್ರೀಯುತ ಚಿಕ್ಕಬೋರಯ್ಯನವರು ವಿದ್ಯಾವರ್ಧಕ ವಿದ್ಯಾಸಂಸ್ಥೆಗಳನ್ನು ಸ್ಥಾಪಿಸಿ, ಬೆಳೆಸಿದರು. ವಕೀಲರಾಗಿದ್ದುಕೊಂಡೇ ಶೈಕ್ಷಣಿಕ ಕ್ಷೇತ್ರದಲ್ಲಿ ನಿರಂತರ ಸೇವೆ ಸಲ್ಲಿಸಿ ತಮ್ಮದೇ ಆದ ಸ್ಥಾನವನ್ನು ಗಳಿಸಿದರು. ಒಮ್ಮೆ ಶಾಸಕರೂ ಆಗಿದ್ದರು. ಆಶ್ರಮದ ಆಗು ಹೋಗುಗಳಲ್ಲಿ ಸಕ್ರಿಯವಾಗಿ ಭಾಗವಹಿಸದವರು ಶ್ರೀಯುತ ಚಿಕ್ಕಬೋರಯ್ಯನವರು. ಈ ವರ್ಷ ರಾಜ್ಯ ಪ್ರಶಸ್ತಿಯ ವಿಜೇತರೂ ಹೌದು]

**ಕೆ. ಟಿ. ಕೃಷ್ಣಪ್ಪನವರು, ನಿವೃತ್ತ ನಿರ್ದೇಶಕರು, ತೋಟಗಾರಿಕೆ ಇಲಾಖೆ, ಕರ್ನಾಟಕ ಸರ್ಕಾರ**



*ಕೆ. ಟಿ. ಕೃಷ್ಣಪ್ಪ*

1933ರಲ್ಲಿ ಅಂದರೆ ಸ್ಟೂಡೆಂಟ್ಸ್ ಹೋಮ್ ಪ್ರಾರಂಭವಾದ ಮಾರನೇ ವರ್ಷವೇ ನಿಲಯ ಸೇರಿದ ಕೆ.ಟಿ. ಕೃಷ್ಣಪ್ಪನವರಿಂದ ನಿಲಯದ ಘಟನೆಗಳ ಸರಮಾಲೆಯೇ ಅರಳಿದವು. ಕುವೆಂಪು ಅವರ ಒತ್ತಾಸೆಯ ಮೇರೆಗೆ ನಿಲಯ ಸೇರಿದ ಕೃಷ್ಣಪ್ಪನವರಿಗೆ ಮನೆಯಲ್ಲಿನ ಮೆತ್ತನೆಯ ಹಾಸಿಗೆಯ ಬದಲು, ನೆಲ, ಹಲಗೆಯ ಮೇಲೆ ಮಲಗಬೇಕಾದದ್ದು ಪ್ರಾರಂಭದಲ್ಲಿ ಮುಜುಗರವಾಯಿತಾದರೂ, ಆ ಸರಳ ಜೀವನವೇ ಮುಂದಿನ ಬದುಕನ್ನು ಅರ್ಥಪೂರ್ಣವಾಗುವಂತೆ ರೂಪಿಸಿದ್ದು ಎಂಬುದನ್ನು ಮರೆತಿಲ್ಲ.

ಬೆಳಗಿನ ತಣ್ಣೀರು ಸ್ನಾನ, ಪ್ರಾರ್ಥನೆ, ಗೀತ ಪಠನ, ಒಂದು ಪುಟ್ಟ ಪ್ರವಚನದ ನಂತರ ಸರಳವಾದ ಬೆಳಗಿನ ತಿಂಡಿ. ಇಂದಿಗೂ ಅವರ ಬಾಯಲ್ಲಿ ನೀರೂರಿಸುವುದು ಅಡಿಗೆ ಕೃಷ್ಣರವರ ಸ್ಪೆಶಾಲಿಟಿ 'ಬೆಲ್ಲದ ಅನ್ನ'. (ಅಷ್ಟೇ ಅಲ್ಲ ಕೃಷ್ಣ ಅವರು ಎಲ್ಲರಿಗೂ ತೋರುತ್ತಿದ್ದ

ಸಮಾನವಾದ ಪ್ರೀತಿ ಮತ್ತು ಕೊನೆಯವರೆಗೂ ಉಳಿಸಿಕೊಂಡು ಬಂದ ಆತ್ಮೀಯತೆಯೂ ಸ್ಪೆಷಲ್ಲೇ). ಮತ್ತೆ ಟಿಫನ್ ಕ್ಯಾರಿಯರ್‌ನಲ್ಲಿ ಊಟಕ್ಕಾಗುವಷ್ಟು ತುಂಬಿಸಿಕೊಂಡು ಶಾಲೆಗೆ ಹೋಗುವುದು.

ಸಂಜೆ ಆಶ್ರಮಕ್ಕೆ ಪ್ರಾರ್ಥನೆಗೆ ಹೋದರೆ ಅಲ್ಲಿ ಸಿಗುತ್ತಿದ್ದ ಕಲ್ಲುಸಕ್ಕರೆ ಮತ್ತು ಏಕಾದಶಿಯಂದು ಸಿಗುತ್ತಿದ್ದ ರಸಾಯನವನ್ನು ಕೃಷ್ಣಪ್ಪನವರು ಮರೆತಿಲ್ಲ.

ಕೃಷ್ಣಪ್ಪನವರ ಸ್ಮೃತಿಪಟಲದಲ್ಲಿ ಸುಳಿದವರಲ್ಲಿ ಅವರೂಡಿಸಿದ್ದ (ಎಲ್ಲರಿಂದಲೂ ಬಹಳ ಬುದ್ಧಿವಂತರು ಎನಿಸಿಕೊಂಡಿದ್ದ) ಶಾಲೆಯ ಎರಡನೆ ಮುಖ್ಯೋಪಾಧ್ಯಾಯರಾಗಿದ್ದವರು ದಿ. ಕೆ. ಜಗನ್ನಾಥ್ ಒಬ್ಬರು.

ಆ ಸಮಯದಲ್ಲಿ ನಡೆಯುತ್ತಿದ್ದ ಒಂದು ವಿಶೇಷ ಕಾರ್ಯಕ್ರಮ 'ಸ್ಟಡಿ ಸರ್ಕಲ್' ಅಂದಿನ ಮಹಾರಾಜರು ಮತ್ತು ಅವರ ಕಾರ್ಯದರ್ಶಿಗಳಾಗಿದ್ದ ಗೋಪಾಲಸ್ವಾಮಿ ಅಯ್ಯಂಗಾರ್ ಅವರ ಪ್ರೋತ್ಸಾಹದಿಂದ ನಡೆಯುತ್ತಿದ್ದ ಕಾರ್ಯಕ್ರಮಕ್ಕಾಗಿ ಬರುತ್ತಿದ್ದ, ಎ. ಆರ್. ವಾಡಿಯಾ, ನಾ. ಕಸ್ತೂರಿಯವರಂತ ದಿಗ್ಗಜರ ಆತ್ಮೀಯತೆಯ ಲಾಭ ವಿದ್ಯಾರ್ಥಿಗಳಿಗೆ ದೊರೆಯಿತು.

ಆ ಕಾಲಘಟ್ಟದಲ್ಲಿ ಅಧ್ಯಕ್ಷರುಗಳಾಗಿದ್ದ ಮತ್ತು ನಿಲಯಪಾಲಕರಾಗಿದ್ದ ಸ್ವಾಮೀಜಿಯವರುಗಳ ವಿಶೇಷತೆಗಳನ್ನು ಕೃತಜ್ಞತೆಯಿಂದ ನೆನಪಿಸಿಕೊಂಡರು. ಸ್ವಾಮಿ ದೇಶಿಕಾನಂದರ ಬಳಿ ಯಾರ ಬೇಡಿಕೆಗೂ ಇಲ್ಲ ಎನ್ನುವ ಉತ್ತರವಿರಲಿಲ್ಲ. ಎಲ್ಲರಿಗೂ ಒಂದು ಶಿಫಾರಸ್ಸು ಪತ್ರ ಸಿಗುತ್ತಿತ್ತು. ಸ್ವಾಮಿ ನಿಶ್ರೇಯಸಾನಂದರು ಸಂಗೀತ ಪ್ರೇಮಿಯಾದರೆ, ಪ್ರಿಯನಾಥ ಮಹಾರಾಜರಿಂದ ಕಥೆಗಳ ಸಿಂಚನವಾಗುತ್ತಿತ್ತು. ಸ್ವಾಮಿ ಋತಾತ್ಮಾನಂದರು ಹಲವು ಕಾಲ ಅನಾರೋಗ್ಯದಿಂದ ಬಳಲುತ್ತಿದ್ದು, ಬ್ರೆಡ್ಡೇ ಅವರ ಆಹಾರವಾಗಿದ್ದರಿಂದ ಅವರು ಬ್ರೆಡ್ ಅಂಡ್ ಬಟರ್ ಸ್ವಾಮೀಜಿಯಾಗಿದ್ದರು. ಅವರ ಬಳಿ ಹೋದವರಿಗೆ ಅದರ ಸ್ಯಾಂಪಲ್ ಕೂಡ ಸಿಗುತ್ತಿತ್ತು. (ಒಂದು ಪೀಸನ್ನು ಹದಿನಾರು ತುಂಡುಗಳನ್ನಾಗಿ ಮಾಡಿ ಕೊಡುತ್ತಿದ್ದರು)

ಆಗ ಬ್ರಹ್ಮಾಚಾರಿಗಳಾಗಿದ್ದ ಶಂಕರ್ ಮಹಾರಾಜ್ (ಮುಂದೆ ಶ್ರೀರಾಮಕೃಷ್ಣ ಮಹಾಸಂಸ್ಥಾನದ ಅಧ್ಯಕ್ಷರಾದ ಸ್ವಾಮಿ ರಂಗನಾಥಾನಂದರು) ಕ್ರೀಡಾ ಪ್ರೇಮಿ (ವಿಶೇಷವಾಗಿ ವಾಲಿಬಾಲ್). ಆ ದಿನಗಳಲ್ಲೇ ಎಲ್ಲರನ್ನೂ ಕೂರಿಸಿಕೊಂಡು ಸ್ವಾಮಿ ವಿವೇಕಾನಂದರ ಸಂದೇಶಗಳ ಮಹತ್ವವನ್ನು ತಿಳಿಹೇಳುತ್ತಿದ್ದರು. ಮುಂದೆ ಕೃಷ್ಣಪ್ಪನವರು ಸ್ವಾಮೀಜಿಯವರ ಆತ್ಮೀಯರಾಗಿದ್ದರು.

ನಿಲಯದ ವಿದ್ಯಾರ್ಥಿಗಳಿಗೆ ಮತ್ತು ಇತರೆ ಆಟಗಳೊಂದಿಗೆ ಪೇಪರ್ ಚೇಸಿಂಗ್ (ಒಂದು ಗುಂಪು ಪೇಪರ್‌ಗಳನ್ನು ಅವಿತಿಟ್ಟು ಬಂದರೆ ಮತ್ತೊಂದು ಗುಂಪು ಅದನ್ನು ಹುಡುಕುವುದು)ನಂಥ ವಿಶಿಷ್ಠ ಆಟಗಳ ಸವಿ ಸಿಗುತ್ತಿತ್ತು.

ಆಗ ಆಶ್ರಮಕ್ಕೆ ಬರುತ್ತಿದ್ದ ಡಾ। ವಿ.ಸುಬ್ಬರಾವ್ ಮತ್ತು ಡಾ। ನಾಯ್ಡು ಅವರಂತ ಉತ್ತಮ ವೈದ್ಯರಿಂದ ಸಮಯೋಚಿತ ವೈದ್ಯಕೀಯ ನೆರವೂ ಸಿಗುತ್ತಿತ್ತು.

ಕೃಷ್ಣಪ್ಪನವರ ಬಾಲ್ಯದ ಬಹು ಅಮೂಲ್ಯ ದಿನಗಳನ್ನು ಶ್ರೀರಾಮಕೃಷ್ಣ ಸ್ಟೂಡೆಂಟ್ಸ್ ಹೋಂನಲ್ಲಿ ಕಳೆದಿದ್ದು, ಬದುಕಿನ ಮಹತ್ವದ ದಿನಗಳಾದದ್ದೇ ಅಲ್ಲದೆ ಮುಂದಿನ ಬದುಕಿನ ಮಹತ್ವವನ್ನು ಹೆಚ್ಚಿಸಿದವು ಎಂದು ಕೃತಜ್ಞತೆಯಿಂದ ನೆನೆಯುತ್ತಾರೆ.

(ಮಲೆನಾಡಿನ ಕೊಲಾವರದ ಶ್ರೀಯುತ ಕೃಷ್ಣಪ್ಪನವರು 1933 ರಲ್ಲಿ ವಿದ್ಯಾರ್ಥಿ ನಿಲಯವನ್ನು ಸೇರಿದರು. ಅತ್ಯಂತ ಹಿರಿಯ, ನಿಲಯದ ಹಳೆಯ ವಿದ್ಯಾರ್ಥಿ. ಕರ್ನಾಟಕ ಸರ್ಕಾರದ ತೋಟಗಾರಿಕೆ ಇಲಾಖೆಯಲ್ಲಿ ಅತ್ಯುನ್ನತ ಹುದ್ದೆಯನ್ನೇರಿ ನಿವೃತ್ತರಾದರು. ಇವರ ಸಹೋದರಿರಬ್ಬರು ವಿದ್ಯಾರ್ಥಿ ನಿಲಯದ ನಿವಾಸಿಗಳಾಗಿ ವ್ಯಾಸಂಗ ಮಾಡಿರುವರು ಹಾಗೂ ಇವರ ಪುತ್ರ ವಿದ್ಯಾಶಾಲೆಯ ಹಳೆಯ ವಿದ್ಯಾರ್ಥಿ, ಈಗ ಇವರು ಬೆಂಗಳೂರಿನಲ್ಲಿ ವಿಶ್ರಾಂತ ಜೀವನ ನಡೆಸುತ್ತಿದ್ದಾರೆ )

## ಪ್ರೊ. ದೇ. ಜವರೇಗೌಡರು, ವಿಶ್ರಾಂತ ಕುಲಪತಿಗಳು, ಮೈಸೂರು ವಿಶ್ವವಿದ್ಯಾನಿಲಯ

"೧೯೩೮ರಲ್ಲಿ ನಾನು ಮಹರಾಜ ಕಾಲೇಜಿನಲ್ಲಿ ಕನ್ನಡ ಆರನೇ ತರಗತಿಯನ್ನು ಸೇರಿ ಊಟ ವಸತಿಗಳಿಗಾಗಿ ಮನೆಯಿಂದ ಮನೆಗೆ ಅಲೆದಾಡುತ್ತಿದ್ದ ಕಾಲದಲ್ಲಿ ಹಳೆಯ ಒಂಟಿಕೊಪ್ಪಲಿಗೆ ಸೇರಿಕೊಂಡಿದ್ದ ಶ್ರೀ ರಾಮಕೃಷ್ಣ ವಿದ್ಯಾರ್ಥಿ ನಿಲಯು ಕಣ್ಣಿಗೆ ಬಿತ್ತು. ಒಂದೆರಡು ದಿನ ಆ ವಿದ್ಯಾರ್ಥಿ ನಿಲಯದ ಮುಂದೆ ನಿಂತು ಪವಿತ್ರ ನಾಮವನ್ನು ಹೊತ್ತೆ. ಆ ನಿಲಯದಲ್ಲಿ ವಾಸ್ತವ್ಯ ಪಡೆಯುವ ಭಾಗ್ಯ ನನಗಿದೆಯೇ ಎಂದು ಯೋಚಿಸುತ್ತಿದ್ದೆ. ಕೊನೆಗೂ ಅವಕಾಶ ಸಿಕ್ಕಾಗ ಶ್ರೀ ರಾಮಕೃಷ್ಣರೇ ನನ್ನ ಸರ್ವರಕ್ಷೆಯಾಗಿದ್ದಾರೆಂಬ ಅರಿವು ನನ್ನ ವ್ಯಕ್ತಿತ್ವವನ್ನೆಲ್ಲ ಪೂರ್ಣವಾಗಿ ಆವರಿಸಿಕೊಂಡಿತ್ತು.



ಪ್ರೊ. ದೇ. ಜವರೇಗೌಡರು

ವಿದ್ಯಾರ್ಥಿನಿಲಯ ಊರಿನ ಮಧ್ಯದಲ್ಲಿದ್ದರೂ, ವಿವಿಕ್ತ ಪ್ರದೇಶದಲ್ಲಿ ತಪೋವನದ ಅಂಚಿನಲ್ಲಿದ್ದಂತೆ ತೋರುತ್ತಿತ್ತು. ಹೊಗೆ, ಧೂಳು ಗದ್ದಲಗಳಿಂದ ಮುಕ್ತವಾಗಿದ್ದ, ನಿರ್ಮಲವಾದ ಗಾಳಿ, ಬೆಳಕು ನಿಲಯದ ಸಂಪತ್ತಾಗಿತ್ತು.

ಬೆಳಗಿನ ತಣ್ಣೀರು ಸ್ನಾನ ಪೂಜೆಗಳಿಂದ ದಿನದ ಕಾರ್ಯಕ್ರಮ ಪ್ರಾರಂಭವಾಗುತ್ತಿತ್ತು. ಕಾಫಿ, ಟೀ ಗಳ ಸುಳಿವಿಲ್ಲ. ಒಂದು ಲೋಟ ತಾಜಾ ಹಾಲು ಕುಡಿದು ಅಧ್ಯಯನದಲ್ಲಿ ತೊಡಗಬೇಕಾಗಿತ್ತು. ೯ ಘಂಟೆಗೆ ಮಲೆಯಾಳಿ ಪಾಕಕಲೆಯ ನಿಷ್ಣಾತ, ಕೃಷ್ಣ ಬಡಿಸಿದ ರುಚಿ, ಶುಚಿಯ ಸರಳ ಊಟ, ಕೂಡಲೇ ಕಾಲೇಜಿಗೆ ಓಟ, ಅಂದಿನ ಅವಿಲ್ ನೆನೆದರೆ ಈವತ್ತೂ ನಾಲಗೆಯಲ್ಲಿ ನೀರೂರುತ್ತದೆ! ಎಲ್ಲಿದ್ದರೂ ಆರೂವರೆ ಘಂಟೆಗೆ ಎಲ್ಲ ವಿದ್ಯಾರ್ಥಿಗಳು ನಿಲಯದಲ್ಲಿರಬೇಕು. ಪೂಜೆ, ಊಟ, ಓದು, ಹತ್ತು ಘಂಟೆಗೆ ಮಲಗೋಣ.

ಶ್ರೀ ರಾಮಕೃಷ್ಣ ಆಶ್ರಮ ಮತ್ತು ನಿಲಯದ ದೂರ ತುಂಬ ಕಡಮೆ ಇದ್ದು, ನಮ್ಮಲ್ಲಿ ಕೆಲವರು ಸರದಿ ತಪ್ಪದೇ ಆಶ್ರಮಕ್ಕೆ ಹೋಗುವ ಪರಿಪಾಠವಿಟ್ಟುಕೊಂಡಿದ್ದೆವು. ಅಲ್ಲಿ ವಿ.ಸುಬ್ರಹ್ಮಣ್ಯ ಅಯ್ಯರ್, ಎ. ಆರ್. ವಾಡಿಯಾ, ನಾ ಕಸ್ತೂರಿ ಮೊದಲಾದ ವಿದ್ವಾಂಸರು ಸ್ವಾಮಿಗಳೂ ವಾರೊಕ್ಕೊಮ್ಮೆ ವೇದಾಂತದ ವ್ಯಾಸಂಗ ನಡೆಸುತ್ತಿದ್ದರು. ಒಮ್ಮೊಮ್ಮೆ ಹೆಚ್.ಸಿ.ದಾಸಪ್ಪನವರೂ ಆ ಗುಂಪಿನಲ್ಲಿ ಸೇರುತ್ತಿದ್ದರು.

ಸ್ವಾಮಿ ದೇಶಿಕಾನಂದರು (ಅಂದಿನ ಅಧ್ಯಕ್ಷರು) ಅಯಸ್ಕಾಂತ ಶಕ್ತಿಗೆ ಒಳಗಾಗದ ವಿದ್ವಾಂಸರಾಗಲಿ, ಸಾಮಾನ್ಯರಾಗಲಿ ಇರಲಿಲ್ಲ. ನನ್ನಂತಹ ವಿದ್ಯಾರ್ಥಿಗಳನ್ನು 'ಮಗು ಚೆನ್ನಾಗಿ ಒದ್ತಾ ಇದ್ದೀಯ; ಏನಾದರೂ ತೊಂದರೆ ಇದ್ದರೆ ಹೇಳಪ್ಪಾ' ಎಂದವರು ಮಾತಾಡಿಸಿ

ಬೆನ್ನಮೇಲೆ ಕೈಯಾಡಿಸಿದಾಗ ಸ್ವರ್ಗ ಒಂದೇ ಗೇಣೆನ್ನುವಷ್ಟು ಆನಂದವಾಗುತ್ತಿತ್ತು.

ನಾನೊಂದು ಸಂಜೆ ಅವರೊಬ್ಬರೇ ಇದ್ದಾಗ, 'ಸ್ವಾಮೀಜಿ ನನ್ನ ಮನೆಯಿಂದ ಐದು ರೂಪಾಯಿ ಸಹ ನಿರೀಕ್ಷಿಸಲಾರೆ. ನನಗೆ ವಿದ್ಯಾರ್ಥಿ ವೇತನ ಸಿಗಲಿಲ್ಲವಾದರೆ ನನ್ನ ಓದನ್ನು ನಿಲ್ಲಿಸಬೇಕಾಗುತ್ತೆ.' ಎಂದು ಬಿನ್ನವಿಸಿಕೊಂಡೆ. 'ನಿನಗೆ ನಿರಾಶೆಯೇಕೆ ಮಗು. ನಮ್ಮ ವಾಡಿಯಾ ಸಾಹೇಬರಿಗೆ ಹೇಳಿ ವಿದ್ಯಾರ್ಥಿ ವೇತನ ಕೊಡಿಸುತ್ತೇನೆ. ಚೆನ್ನಾಗಿ ಓದು' ಎಂದು ಬೆನ್ನು ತಟ್ಟಿದರು. ಮತ್ತೊಮ್ಮೆ ವಾಯು ಸಂಚಾರ ಕಾಲದಲ್ಲಿ ವಾಡಿಯಾ ಅವರಿಗೆ ನನ್ನ ಪರಿಚಯ ಮಾಡಿಕೊಟ್ಟರು. ನನಗೆ ಒಂದಲ್ಲ, ಎರಡು ವಿದ್ಯಾರ್ಥಿ ವೇತನ ಬಂದುವು.

ನನ್ನ ಜೀವನದ ತಿರುವಿಗೆ ಶ್ರೀ ರಾಮಕೃಷ್ಣ ವಿದ್ಯಾರ್ಥಿನಿಲಯದ ಮೂರು ವರ್ಷಾವಧಿಯ ವಾಸವೇ ಕಾರಣವೆಂಬುದಂತೂ ಸತ್ಯ" (ದೇಜಗೌ ಎಂದೇ ಸಾಹಿತ್ಯ ಕ್ಷೇತ್ರದಲ್ಲಿ ಪ್ರಖ್ಯಾತರಾಗಿರುವ ಪ್ರೊ. ದೇ ಜವರೇಗೌಡರು ೧೯೩೮ ರಲ್ಲಿ ವಿದ್ಯಾರ್ಥಿ ನಿಲಯ ಸೇರಿ ತಮ್ಮ ವ್ಯಾಸಂಗವನ್ನು ಮುಂದುವರಿಸಿದರು. ಮುಂದೆ ಅವರು ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ತಮ್ಮದೇ ಆದ ವೈಚಾರಿಕ ಛಾಪು ಮೂಡಿಸಿದರು. ೧೯೬೯ ರಿಂದ ೧೯೭೫ ರವರೆಗೆ ಮೈಸೂರು ವಿಶ್ವವಿದ್ಯಾನಿಲಯದ ಉಪಕುಲಪತಿಗಳಾಗಿದ್ದು, ನಾಡೋಜ, ಪಂಪ ಪ್ರಶಸ್ತಿ, ಪದ್ಮಶ್ರೀ, ಗೊರೂರು ಪ್ರಶಸ್ತಿ, ಕರ್ನಾಟಕ ರತ್ನ ಮುಂತಾದ ಪ್ರತಿಷ್ಠಿತ ಪುರಸ್ಕಾರಗಳಿಗೆ ಭಾಜನರಾಗಿದ್ದಾರೆ. ಶ್ರೀ ರಾಮಕೃಷ್ಣ ಸ್ಟೂಡೆಂಟ್ಸ್ ಹೋಮ್‌ನಲ್ಲಿ ಕಳೆದ ದಿನಗಳ ನೆನಪುಗಳನ್ನು ಬಹಳ ಹುಮ್ಮಸ್ಸಿನಿಂದ ನೆನೆದರು ದೇ.ಜವರೇಗೌಡರು.)

## Sri C B Lakshmana Rao, Engineer in Chief (Retd.), Govt. of Karnataka

I stayed in Ramakrishna Students' Home for five years from 1944 to 1949 during my high school and Intermediate college days. I was studying in Mahajana High School and later in Intermediate College (now Yuvaraja's College), Rev. Swami Shambhavanandaji was the President of the Ashram and Rev. Swami Vedanandaji was our warden. I was lucky to be trained by these two strict but affectionate disciplinarians and it helped me in my later life. Rev. Swami Somanathanandaji was a senior monk of the Ramakrishna order and he used to travel extensively to spread the spiritual literature. My father who was an Electrical Engineer at Sivasamudram happened to meet him and that is how I entered the students' home.



*C B Lakshmana Rao*

We were twenty four boys in the students' home including Sri S M Krishna, present Union Minister of External Affairs, late M S Krishnappa, late M D Narayan, Sri S T Krishnappa, Sri C U Bhaskar, late L Gopala Singh, late Dr. B S Venkatachalaiah and late G Kallappa whom I remember vividly. Dr Venkatachalaiah was my distant cousin and I remember, his father was not happy when Venkatachalaiah chose Chemistry, Botany and Geology for his degree course. But in the long run, not only Dr Venkatachalaiah became the Director of Birbal Sahni.s Institute of Paleo Botany and later, Advisor to the Oil & Natural Gas Commission, but also his contribution to the research work in his subject was recognized both at the national and international levels. It is interesting to note that, after Dr Venkatachalaiah passed away, his wife has created an Endowment in her husband's name for the highest scorer in Science in Vidyashala.

Swami Vedanandaji most frequently used to ask us affectionately "Will you be a good boy or a goody goody boy?", implicitly meaning that we should become creative and dynamic.

The blessings of the Holy Trio through the swamijis of the ashrama have sustained me in my life even after my student days.

I am now a member of Sri Ramakrishna Seva Sangha.

- C B Lakashmana Rao

*[Sri C B Laksmana Rao served the Public Works Department, Govt. of Karnataka, in various capacities and rose to the highest post of Engineer-in-Chief, Irrigation. He holds many Honorary Fellowships and Memberships. He is on the Managaing Committee of our Old Boys' Association].*

## Sri N S Ramdas, Retired P.W,D. officer

"The experience of my stay in Sri Ramakrishna Student home has helped me in evolving myself spiritually and instilled in me a spirit of service and kindled in me the need to work for betterment of life of the downtrodden in society."

"The days I spent with the monks of the Ramakrishna Order, was a golden period specially for us during formative years and made a deep impression on our young minds and shaped our lives."



*N S Ramdas*

"Ramakrishna Student home was, during our time, the pioneering institution in Mysore region with inmates drawn from Malnad,

Mandya and Kodagu, where we were exposed to disciplined living, focused study and we had the opportunity to interact with great scholars of Mysore university of that time."

"The evolution of Ramakrishna students home as a residential school and the consequent construction and birth of Sri Ramakrishna Vidyashala, happened during our stay in the hostel and we were lucky to be witnesses for the birth of a national institution when nationalism was at its peak."

It is my constant prayer to Sri Guru Maharaj to continue to bestow His blessings on all of us and on the institution so that all the pioneering efforts and vision of Srimath Swami Shambhavanandaji are fulfilled to its entirety.

*[N S Ramdas stayed in the hostel during 1948-1953 when he was pursuing his high school and college education. He has served in various capacities in the PWD of the State of Karnataka. An initiated devotee of Sri Ramakrishna, he still continues to be associated with the ashrama. He is a former managing committee member of the OBA.]*


**WE WELCOME ALL OLD BOYS TO OBA**

- **Patron - Rs. 3,000/-**
- **Life Member - Rs. 1,000/-**
- **One time Subscription**

***Cheque / DD in favour of* Sri Ramakrishna Vidyashala**


## From the Secretary's Desk:

We are pleased to come back to you with the July – December 2011 issue of 'Voice of Vidyashala Alumni'. The annual spiritual retreat for our alumni was a major event during this period and the theme of the retreat was 'Enlightened Citizenship' . It was well attended and the alumni enjoyed fruitful participation. The other two annual events that took place were, Games meet for the alumni of Mysore and nearby places on 6th November and the 39th Inter High School Competition in General Knowledge for the IX and X standard students of Mysore city on 20th November. A regional meet in Mandya during the month of February 2012 is on the anvil.

The present issue of VOVA brings to you a special supplement to mark the 80th year of the erstwhile Ramakrishna Students' Home – the forerunner of Vidyashala – which has turned out men of eminence and excellence like professors and Vice chancellors, orators and poets, administrators, ministers, noted engineers and distinguished agriculturists. The Association has done well to arrange 'Marali Nammaya Goodige' for the then inmates, on the occasion of the annual OBA Meet on 25th December 2011. It is a unique programme of home coming for many of them after a long gap of five to six decades, who are now very senior and respected citizens of our country. Our salutations to them!

Wishing you a very happy new year!
Secretaries

## ರಿಟ್ರೀಟ್ 2011 ಸಂಕ್ಷಿಪ್ತ ವರದಿ

ದೈವಕೃಪೆಯೇ ಸಸ್ಯ ಶಾಮಲೆಯಾಗಿ ಸುಂದರ ಮುಗುಳ್ನಗೆ ಬೀರಿದಂತಿರುವ RIMSEಯ ಮಡಿಲಿನಲ್ಲಿ ಹಳೆ ವಿದ್ಯಾರ್ಥಿಗಳ ರಿಟ್ರೀಟ್‌ಗೆ ವೇದಿಕೆ ಸಿದ್ಧವಾಗಿತ್ತು. Enlightened Citizenship ಎಂಬ ಮಹತ್ವದ ವಿಷಯದ ವಿಚಾರ ಮಂಥನಕ್ಕೆ ಪೂಜ್ಯ ಸ್ವಾಮೀಜಿಯವರಾದ ಶ್ರೀ ಸುರೇಶಾನಂದಜೀ, ಶ್ರೀ ಜಗದಾತ್ಮಾನಂದಜೀ, ಶ್ರೀ ಮುಕ್ತಿದಾನಂದಜೀ, ಶ್ರೀ ಸತ್ಯೇಶಾನಂದಜೀ ಹಾಗೂ ಶ್ರೀ ಮಹೇಶಾತ್ಮಾನಂದಜೀ ಇವುರುಗಳ ದಿವ್ಯ ಸಾನಿಧ್ಯದಲ್ಲಿ ವಿಷಯ ಸೂಚಿಯ ಕಾರ್ಯಕ್ರಮ 05.08.2011ರ ಶುಕ್ರವಾರ ಸಂಜೆಯ ಪ್ರಾರ್ಥನೆಯ ನಂತರ ಆರಂಭವಾಯಿತು. Enlightened Citizenship ಎಂಬುದನ್ನು ಕೇಳುತ್ತಿದ್ದಂತೆ ಇದೇ ಹೆಸರಿನ, ಪರಮ ಪೂಜ್ಯ ಶ್ರೀಮದ್ ಸ್ವಾಮೀ ರಂಗನಾಥಾನಂದಜೀ ಮಹಾರಾಜ್‌ರವರ ಪುಸ್ತಕ ನೆನಪಾಗುವುದು ಸಹಜ. ದಿನನಿತ್ಯದ ಬದುಕಿನ ಜಂಜಾಟಗಳ ಮಧ್ಯದಲ್ಲಿ ಆಧ್ಯಾತ್ಮಿಕ ಸಿಂಚನದ ಸುವರ್ಣಾವಕಾಶ ನೀಡುವ ರಿಟ್ರೀಟ್ ತನ್ನ ಸಾರ್ಥಕ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸುತ್ತಲೇ ಬಂದಿದೆ. ಪೂಜ್ಯ ಶ್ರೀ ಮಹೇಶಾತ್ಮಾನಂದಜೀಯವರು ವಿಷಯವನ್ನು ವಿವರಿಸುತ್ತಾ ದೈವಶ್ರದ್ಧೆಯ ಮಹತ್ವವನ್ನು ಈ ಕೆಳಗಿನ ಸುಂದರ ಸಾಲುಗಳಲ್ಲಿ ವಿವರಿಸಿದರು.

Look back and Thank God,
Look forward and Trust God,
Look around and Serve God,
Look within and Find God.

ಅದೇದಿನ ರಾತ್ರಿಯ ಭೋಜನಾನಂತರ ವಿದ್ಯಾಶಾಲೆಯ ಶ್ರೀ ಕುಂದಣ ನಾಗೇಂದ್ರರವರೂ ಹಾಗೂ ವಿದ್ಯಾಶಾಲೆಯ ವಿದ್ಯಾರ್ಥಿಗಳೂ ಜೊತೆಗೂಡಿ ಪ್ರಸ್ತುತ ಪಡಿಸಿದ ಭಕ್ತಿಗೀತೆ ಹಾಗೂ ಭಜನಾ ಕಾರ್ಯಕ್ರಮಗಳು ವಿಶಿಷ್ಟವಾಗಿದ್ದವು.

ಎರಡೂ ದಿನ ಮುಂಜಾನೆ ಪ್ರಾರ್ಥನೆಯ ನಂತರ RIMSEಯ ನಿವೃತ್ತ ಪ್ರಾಂಶುಪಾಲ ಯೋಗಾಚಾರ್ಯ ಡಾ. ಎ. ಆರ್. ಸೀತಾರಾಮ್‌ರವರ

ಮಾರ್ಗದರ್ಶನದಲ್ಲಿ ಯೋಗ ತರಬೇತಿಯ ತರಗತಿಗಳು ನಮ್ಮ ದೇಹ-ಮನಸ್ಸುಗಳ ಸ್ವಾಸ್ಥ್ಯವನ್ನು ಉತ್ತಮಪಡಿಸಿದವು.

06.08.2011 ರ ಶನಿವಾರ ಮೊದಲ ಗೋಷ್ಠಿಯಲ್ಲಿ ಚೆನ್ನೈ ಆಶ್ರಮದ, 'ವೇದಾಂತ ಕೇಸರಿ'ಯ ಸಂಪಾದಕರಾದ ಪೂಜ್ಯ ಸ್ವಾಮಿ ಆತ್ಮಶ್ರದ್ಧಾನಂದಜೀ ಮಹಾರಾಜ್‌ರವರು ರಿಟ್ರೀಟ್‌ನ ವಿಷಯದ ಪ್ರಧಾನ ಉಪನ್ಯಾಸ ನೀಡಿದರು. ಅತ್ಯಂತ ವಿಸ್ತಾರವೂ ಹಾಗೂ ಗಹನವಾದ ನೆಲೆಗಳಿಂದ ರೂಪಿತಗೊಂಡ ಅವರ ವಿಚಾರಧಾರೆ ಅಮೂಲ್ಯ ವಿಷಯಗಳನ್ನು ನಮ್ಮ ಅರಿವಿಗೆ ತಂದಿತು. ಒಟ್ಟಾರೆ ಮನುಕುಲದ ವಿಕಾಸ, ಶಿಲಾಯುಗ, ನಂತರದ ಚಾರಿತ್ರಿಕ ಹಂತಗಳು, ಭಾರತೀಯ ನೆಲೆಯ ಋಷಿ, ಮುನಿ, ಪಂಡಿತರ ವಿಚಾರಧಾರೆ, ಗ್ರೀಕ್ ತತ್ವ ಶಾಸ್ತ್ರಜ್ಞರ ಚಿಂತನೆಗಳ ಧಾರೆಯಲ್ಲಿ ರೂಪುಗೊಂಡ ಆಧುನಿಕ ಗಣರಾಜ್ಯದ ಪರಿಕಲ್ಪನೆಯನ್ನು ವಿವರಿಸಿದರು. ಆದರೆ ಎಲ್ಲಿಯವರೆಗೆ ಸಮಾಜದ ಮೂಲ ಕೇಂದ್ರವಾದ ಗೃಹಿಣಿ, ಗೃಹಸ್ಥ ಹಾಗೂ ಗೃಹ ಎಂಬುದು ಆರೋಗ್ಯಕರ ಮನೋಸ್ಥಿತಿಯನ್ನು ಹೊಂದುವುದಿಲ್ಲವೋ, ಅಲ್ಲಿಯವರೆವಿಗೂ ಸಾಮಾಜಿಕ ತಲ್ಲಣಗಳು ಇದ್ದೇ ತೀರುವುವು ಎಂಬ ಸ್ವಾಮಿ ವಿವೇಕಾನಂದರ ವೇದಾಂತ ದರ್ಶನದ ಒಳನೋಟವನ್ನು ಉಲ್ಲೇಖಿಸಿದರು. ಎಚ್ಚೆತ್ತುಗೊಂಡ ನಾಗರೀಕ ಪ್ರಜ್ಞೆಯನ್ನು ಆಧ್ಯಾತ್ಮಿಕ ವಿಕಾಸವಿಲ್ಲದೇ ಸಾಧಿಸಲು ಸಾಧ್ಯವಿಲ್ಲ ಎಂಬುದನ್ನು ಭರ್ತೃಹರಿಯ ನೀತಿಶತಕದಿಂದ ವಿವರಿಸಿದರು. ಸಾಮಾನ್ಯನಿಂದ ಸತ್ಪುರುಷನಾಗುವುದು, ವಿವೇಕ-ಧರ್ಮ-ಆಧ್ಯಾತ್ಮಿಕತೆ- ತತ್ವಶಾಸ್ತ್ರ, ನೀತಿಕತೆಗಳು- ಸದಾಚಾರದ ನಿತ್ಯ ಪದ್ಧತಿಗಳ ಶಾಶ್ವತ ಸಂಬಂಧವನ್ನು ನಮ್ಮ ಅರಿವಿಗೆ ತಂದರು.

ನಂತರದ ಗೋಷ್ಠಿಯಲ್ಲಿ ಪರಮಪೂಜ್ಯ ಶ್ರೀ ಜಗದಾತ್ಮಾನಂದಜೀ ಮಹಾರಾಜ್‌ರವರ ಮಾರ್ಗದರ್ಶನದಲ್ಲಿ, 'ನಾನು' ಎಂಬ ಅಹಂಕಾರವನ್ನು ತ್ಯಜಿಸುತ್ತಾ, ದೈವ ಸಾಕ್ಷಾತ್ಕಾರದಲ್ಲಿ ಲೀನವಾಗುವ ಧ್ಯಾನದ ಮನೋಸ್ಥಿತಿಯನ್ನು ಅರಿತುಕೊಂಡೆವು.

ಮಧ್ಯಾಹ್ನದ ಎರಡೂ ಗೋಷ್ಠಿಗಳೂ ವಿನೂತನವಾಗಿದ್ದವು. ಪ್ರಪ್ರಥಮ ಬಾರಿಗೆ ಹಳೆಯ ವಿದ್ಯಾರ್ಥಿ ಹಾಗೂ ವಿದ್ಯಾಶಾಲೆಯ ಇಂದಿನ ಅಧ್ಯಾಪಕರು ವಿಷಯ ಮಂಡನೆ ಮಾಡುವ ಹೊಸ ಹೆಜ್ಜೆಗೆ ನಾವು ಸಾಕ್ಷಿಯಾದೆವು. ಹಳೆಯ ವಿದ್ಯಾರ್ಥಿ ಡಾ|| ಮರುತ್ತದುರೈ ತಂಜಾವೂರಿನಲ್ಲಿ ಕಾರ್ಯ ನಿರ್ವಹಿಸುತ್ತಿರುವ ಶಸ್ತ್ರಚಿಕಿತ್ಸಾ ತಜ್ಞರು ಹಾಗೂ ಹಲವು ಮಾನವೀಯ ಸೇವೆಗಳನ್ನು ಕೈಗೊಂಡ ಹಾಗೂ ಕೈಗೊಳ್ಳುತ್ತಿರುವ, ವಿದ್ಯಾಶಾಲೆಯ ಮೌಲ್ಯಗಳನ್ನು ಜೀವನದಲ್ಲಿ ಅಳವಡಿಸಿಕೊಂಡಿರುವ ಆತ್ಮೀಯ ಗೆಳೆಯ. All things are dark and beautiful ಎಂಬ ವಿಷಯವನ್ನು ಅತ್ಯಂತ ಘನವಾಗಿ ಪ್ರಸ್ತುತಪಡಿಸಿದರು. ಮಹಾತ್ಮಾ ಗಾಂಧೀಜೀಯವರ ಆದರ್ಶ, ಹೊಟ್ಟೆ, ದೇಹ, ಅಹಂಕಾರ, ಹಸಿವು- ರಿಚರ್ಡ್ ಡಾಕಿನ್ಸ್ ಹೇಳಿದ The selfish gene ನ ಮಹತ್ವಗಳನ್ನು ಒಳಗೊಂಡ ಅವರ ಪವರ್‌ಪಾಯಿಂಟ್ ಪ್ರಸೆಂಟೇಶನ್ ಒಂದು ಹೊಸ ಅನುಭವ ನೀಡಿತು.

ವಿದ್ಯಾಶಾಲೆಯ ಪ್ರಾಂಶುಪಾಲರಾದ ಶ್ರೀ ಎಸ್. ಬಾಲಾಜಿ, ಇಂಗ್ಲೀಷ್ ಪ್ರಾಧ್ಯಾಪಕರಾದ ಶ್ರೀ ಸರಗೂರು ರಮೇಶ್, ಕನ್ನಡ ಪ್ರಾಧ್ಯಾಪಕರಾದ ಶ್ರೀ ಎಸ್.ಎಸ್. ರಮೇಶ್ ಇವರುಗಳು ಕ್ರಮವಾಗಿ ಮಹಾತ್ಮ ಗಾಂಧೀಜಿ, ಶ್ರೀ ರಾಮಕೃಷ್ಣ ಪರಮಹಂಸ ಹಾಗೂ ಭಗವಾನ್ ಬುದ್ಧರ ಜೀವನಗಳು ಯಾವ ರೀತಿ ಮನುಕುಲವನ್ನು ಪರಿವರ್ತಿಸಿದವು ಎಂಬುದರ ಬಗ್ಗೆ ಮೌಲಿಕವಾದ ಉಪನ್ಯಾಸವನ್ನು ನೀಡಿದರು. ಇಂದಿನ ವಿದ್ಯಾಶಾಲೆಯ ಉಪನ್ಯಾಸಕರ ಸಾಮರ್ಥ್ಯ ಹಾಗೂ ವಿಚಾರ ಸಂಪನ್ನತೆಯನ್ನು ಸವಿಯುವ ವಿಶೇಷ ಅವಕಾಶ ನಮಗೆ ದೊರೆತಿದ್ದು, ನಮ್ಮ ಭಾಗ್ಯವೇ ಹೌದು. ಪರಮಪೂಜ್ಯ ಸ್ವಾಮೀ ಶ್ರೀ ಕರುಣಾಕರಾನಂದಜೀ ಮಹಾರಾಜ್‌ರವರು ಈ ಗೋಷ್ಠಿಯ ಅಧ್ಯಕ್ಷತೆ ವಹಿಸಿ ತಮ್ಮ ಚಿಂತನೆಗಳನ್ನು ಹಂಚಿಕೊಂಡರು.

ಅಂದಿನ ಸಂಜೆ ಭಾರತ ದೇಶ, ಧರ್ಮ, ಸಂಸ್ಕೃತಿಗಳ ಪ್ರಚಾರದಲ್ಲಿ ಮಹತ್ವದ ಸಾಧನೆ ಮಾಡಿರುವ ಶ್ರೀ ಚಕ್ರವರ್ತಿ ಸೂಲಿಬೆಲೆ ಹಾಗೂ ತಂಡದವರಿಂದ "ಜಾಗೋ ಭಾರತ್" ಎಂಬ ವಿಶೇಷ ಕಾರ್ಯಕ್ರಮ ವಿದ್ಯಾಶಾಲೆಯ ಸಭಾಂಗಣದಲ್ಲಿ ನೆರವೇರಿತು. ವಿದ್ಯಾಶಾಲೆಯ ವಿದ್ಯಾರ್ಥಿಗಳು ಹಾಗೂ ಹಳೆಯ ವಿದ್ಯಾರ್ಥಿಗಳನ್ನು ದೇಶಭಕ್ತಿ, ಅಭಿಮಾನಗಳ ಮಹಾಪೂರದಲ್ಲಿ ಮುಳುಗಿ ಏಳುವಂತೆ ಮಾಡಿತು.

7ನೇ ತಾರೀಖು ಭಾನುವಾರ ಬೆಳಗ್ಗೆ ವಿದ್ಯಾಶಾಲೆಯ ಪ್ರಸ್ತುತ ಕರೆಸ್ಪಾಂಡೆಂಟ್ ಆಗಿರುವ ಮತ್ತು ಹಳೆಯ ವಿದ್ಯಾರ್ಥಿಯೂ ಆಗಿರುವ ಪೂಜ್ಯ ಸ್ವಾಮಿ ಸತ್ಯೇಶಾನಂದಜೀ ಮಹಾರಾಜ್‌ರವರು ಎಚ್ಚೆತ್ತ ನಾಗರೀಕ ಪ್ರಜ್ಞೆಗೆ ತೀರ ಅವಶ್ಯಕವಾಗಿರುವ Man making education ಬಗ್ಗೆ ಅತ್ಯಂತ ವಿಚಾರಪೂರ್ಣ ಉಪನ್ಯಾಸ ನೀಡಿದರು. ಮನುಷ್ಯನಿಗೆ ಬೇಕಾದ ಏಕಾಂತ, ಸತ್ಸಂಗ ಹಾಗೂ ಪುಣ್ಯ ಪುರುಷರ ವಿಚಾರಧಾರೆಯೊಡನೆ ಬದುಕು ರೂಪಿಸಿಕೊಳ್ಳುವ ಬಗ್ಗೆ ವಿದ್ಯಾಶಾಲೆಯ ದಿನಗಳ ನೆನಪಿನಿಂದ ಮಹತ್ವದ ವಿಷಯಗಳನ್ನು ವಿವರಿಸಿದರು.

ನಂತರ ಪೂಜ್ಯ ಸ್ವಾಮಿ ಶ್ರೀ ಮುಕ್ತಿದಾನಂದಜೀ ಮಹಾರಾಜ್‌ರವರ ಮಾರ್ಗದರ್ಶನದಲ್ಲಿ, ಮನಸ್ಸಿನ ಚಂಚಲತೆಯನ್ನು ನಿವಾರಿಸಿಕೊಂಡು ಏಕಾಗ್ರತೆಯಿಂದ ಪರಮಶಾಂತಿಯ ನೆಲೆಗೆ ಸಾಗುವ ಮಾನಸಿಕ ಪಯಣದ ಬಗ್ಗೆ ನಡೆದ ಧ್ಯಾನ ಪ್ರಕ್ರಿಯೆ ಅಭೂತಪೂರ್ವವಾದ ಅನುಭವ ನೀಡಿತು.

ಕನ್ನಡದ ಭಗವದ್ಗೀತೆ ಎಂದೇ ಹೆಸರಾಗಿರುವ "ಮಂಕುತಿಮ್ಮನ ಕಗ್ಗ"ವು ಸಾರಿ ಸಾರಿ ಹೇಳುವ ನೀತಿಯನ್ನು, ಜೀವನ ಸಂದೇಶವನ್ನು ಅದ್ವಿತೀಯವಾಗಿ ವಿವರಿಸುವ ಚಿನ್ಮಯ ಮಿಷನ್‌ನ ಜ್ಞಾನ ತಪಸ್ವಿಗಳು ಯತಿವರರೂ ಆದ ಶ್ರೀ ಬ್ರಹ್ಮಾನಂದಜೀಯವರ ವಾಗ್ಝರಿಗೆ ತಲೆಬಾಗಿದೆವು. ವಿದ್ವತ್ ಪ್ರತಿಭೆಯ ಈ ಶ್ರೇಷ್ಠ ಉಪನ್ಯಾಸ ಮನುಕುಲದ ಜೀವಜ್ಞಾನ ಸಂಹಿತೆಯ ಮೇಲೆ ಬೆಳಕು ಬೀರಿತು. ಮಾತಿನಲ್ಲಿ ಹಿಡಿದಿಡಲಾಗದ ಘನವಾದ ನೆಲೆಯಲ್ಲಿ ವಿಷಯವನ್ನು ನಿರೂಪಿಸಿದರು.

ಸಂಜೆ ಪೂಜ್ಯ ಸ್ವಾಮಿ ಮಹೇಶಾತ್ಮಾನಂದಜೀಯವರ ನೇತೃತ್ವದಲ್ಲಿ ಶಿಬಿರಾರ್ಥಿಗಳು ತಮ್ಮ ವಿಚಾರ ಸ್ಪಂದನಗಳನ್ನು ಹಂಚಿಕೊಂಡರು. ಸಮಾರೋಪ ಸಮಾರಂಭದಲ್ಲಿ ಆಶೀರ್ವಚನ ನೀಡಿದ ಪರಮಪೂಜ್ಯ ಶ್ರೀ ಸುರೇಶಾನಂದಜೀ ಮಹಾರಾಜ್‌ರವರು ವಿದ್ಯಾಶಾಲೆಯ ಬಹಳಷ್ಟು ಹಳೆಯ ವಿದ್ಯಾರ್ಥಿಗಳು ರಿಟ್ರೀಟ್‌ನ ಸದುಪಯೋಗ ಪಡೆಯುತ್ತಿಲ್ಲ ಎಂದು ವಿಷಾದಿಸಿ, ತಪ್ಪದೇ ಹೆಚ್ಚಿನ ಸಂಖ್ಯೆಯಲ್ಲಿ ರಿಟ್ರೀಟ್‌ಗೆ ಬನ್ನಿ, ಮತ್ತು ನಿಮ್ಮ ಇತರ ಗೆಳೆಯರನ್ನು ಕರೆತನ್ನಿ ಎಂಬ ಆಗ್ರಹಪೂರ್ವಹಕ ಸಂದೇಶದೊಂದಿಗೆ ಈ ಬಾರಿಯ ರಿಟ್ರೀಟ್ ಸಂಪನ್ನಗೊಂಡಿತು.

– ಬಿ.ಎಸ್. ದಿವಾಕರ (1975 –78)
9342562679

**We welcome articles to VOVA from members in the form of snippets, short stories, etc, *Contact:***

**Staff Secretary, Old Boys' Association.**
**Sri Ramakrishna Vidyashala**
**Yadavagiri, Mysore 570020 Phone : 0821 - 2417555.**

*Meet our alumni:*

# M P SHYAM AWARDED Ph.D.




***M P Shyam receiving the Doctorate from Dr. S. C. Sharma, Vice Chancellor of Tumkur University, in presence of His Excellency Hansraj Bharadwaj, Governor of Karnataka and Dr. V S Acharya, Hon'ble Minister for Higher Education, Govt. of Karnataka.***

M P Shyam (Batch: 1976 – 1979) was awarded Ph.D. for his thesis on 'Modeling Logistics System for an Automobile Network' by the Tumkur University, Department of Management Studies. He was conferred the doctorate during the convocation held on 11th November 2011 at Tumkur.

Mr M P Shyam hails from a business family inextricably linked to education. His father, Dr M K Panduranga Shetty is a renowned educationist and a philanthropist.

Mr Shyam, holds a Bachelor's Degree in Mechanical Engineering and a Master's Degree in Grain Science from the of Kansas State University

Mr. Shyam has steered companies such as Cauvery Ford, Advaith Hyundai, Magnum Honda, Garuda Maruti, Advaith Automation, Akshaya Motors etc., to enviable success. Cauvery Ford has been a recipient of Ford World Wide Presidents Award for four consecutive years and Advaith Hyundai has won the Best Dealership Award in India for the last 10 years. All these recognitions have propelled Mr. Shyam to the membership of Ford Advisory Council.

Today, Mr. Shyam heads a Group, selling an eclectic mix of products ranging from two wheelers to small/medium/luxury cars, light commercial vehicles, tractors to trucks and earth moving equipments.

Mr. Shyam is also a trustee of the Rashtreeya Shikshana Samithi Trust which runs all the R V Institutions in the city of Bangalore. Our hearty congratulations to M P Shyam!

## ರಾಜ್ಯಮಟ್ಟದ ಕೃಷ್ಣಾನಂದ ಕಾಮತ ಸಾಹಿತ್ಯ ಪುರಸ್ಕಾರಕ್ಕೆ ಡಾ. ನಿರಂಜನ ವಾನಳ್ಳಿ ಕೃತಿ ಆಯ್ಕೆ.

ಮೈಸೂರು ವಿಶ್ವವಿದ್ಯಾನಿಲಯದ ಪತ್ರಿಕೋದ್ಯಮ ವಿಭಾಗದ ಸಹ ಪ್ರಾಧ್ಯಾಪಕ ಡಾ, ನಿರಂಜನ ವಾನಳ್ಳಿ ಅವರ "ಒಮಾನ್ ಎಂಬ ಒಗಟು" ಕೃತಿಯು 2010ನೇ ಸಾಲಿನ ಪ್ರತಿಷ್ಠಿತ ಕೃಷ್ಣಾನಂದ ಕಾಮತ್ ಪುರಸ್ಕಾರಕ್ಕೆ ಆಯ್ಕೆಯಾಗಿದೆ.

ಹಿರಿಯ ಸಾಹಿತಿ ಕೃಷ್ಣಾನಂದ ಕಾಮತರ ಸ್ಮರಣೆಯಲ್ಲಿ ಹೊನ್ನಾವರದ ಕೃಷ್ಣಾನಂದ ಕಾಮತ್ ಪ್ರತಿಷ್ಠಾನವು ಇದೇ ಮೊದಲಬಾರಿಗೆ ಈ ಪುರಸ್ಕಾರವನ್ನು ಘೋಷಿಸಿದೆ. ಕಾಮತರ ಆಸಕ್ತಿಯ ಕ್ಷೇತ್ರಗಳಾಗಿದ್ದ ಪರಿಸರ ಮತ್ತು ಪ್ರವಾಸ ಸಾಹಿತ್ಯ ಕೃತಿಗಳಿಗೆ ಈ ಪ್ರಶಸ್ತಿಯು ಮೀಸಲಾಗಿದ್ದು ಪ್ರಶಸ್ತಿಯು 25ಸಾವಿರ ರೂಪಾಯಿ ನಗದು ಹಾಗೂ ಪ್ರಶಸ್ತಿ ಫಲಕವನ್ನೊಳಗೊಂಡಿದೆ.



ಡಾ. ನಿರಂಜನ ವಾನಳ್ಳಿಯವರ 'ಒಮಾನ್ ಎಂಬ ಒಗಟು' ಕೃತಿಯು ಒಮಾನ್ ದೇಶದ ಅವರ ಅನುಭವಗಳ ಕಥನವಾಗಿದ್ದು 2010ರ ಅತ್ಯುತ್ತಮ ಪ್ರವಾಸ ಸಾಹಿತ್ಯ ಕೃತಿಯೆಂದು ತೀರ್ಪುಗಾರರ ಮಂಡಳಿಯು ನಿರ್ಧರಿಸಿದೆ.

ಇದೇ ಪುಸ್ತಕಕ್ಕೆ ಈ ವರ್ಷ ಶಿವಮೊಗ್ಗ ಕರ್ನಾಟಕ ಸಂಘ ಕೊಡಮಾಡಿದ ಕುಕ್ಕೆ ಸುಬ್ರಹ್ಮಣ್ಯ ಶಾಸ್ತ್ರಿ ಪ್ರವಾಸ ಸಾಹಿತ್ಯ ಬಹುಮಾನವೂ ಲಭ್ಯವಾಗಿದೆ.

ಡಾ. ನಿರಂಜನ ಅವರು ಶ್ರೀರಾಮಕೃಷ್ಣ ವಿದ್ಯಾಶಾಲೆಯಲ್ಲಿ 1977ರಿಂದ 1981ರ ವರೆಗೆ ವಿದ್ಯಾರ್ಥಿಯಾಗಿದ್ದರು.

## Eminent Engineer Award to Govindaraj




*Govindaraj Receiving Award*

The Institution of Engineers (India) honoured our alumnus V Govindaraj, (batch:1975 – 82) Deputy Secretary (Water Resources Dept. (MI), Govt. of Karnataka, on the occasion of the 44th Engineers' Day on 15th September 2011 and conferred on him the prestigious 'Eminent Engineer' Award in recognition of his contribution to the engineering field. Our hearty congratulations to him!

Yet another of our alumnus Dr. Wooday P Krishna (batch: 1975 - 78) Hon. Secretary, Seshadripuram Institutions, Bangalore, and Chairman, Committee for Advancement of Engineering Divisions, spoke on the significance of Engineers' Day, on the occasion and said "The best way to repaying its debt of gratitude to Sir M Visvesvaraya is to revere him and emulate his qualities." He is seen extreme left in the picture.



***G Jagadeesh***

## Jagadeesh Gopalan Assumes charge as Chairman

Prof. G Jagadeesh of The Dept. of Aerospace Engineering, Indian Institute of Science, Bangalore, has assumed charge as The Chairman of Centre of Excellence in High Speed Aerodynamics. This is a new centre which will contribute intellectually to India's defence capability by helping in the development of next generation high speed (supersonic/hypersonic) missiles. This centre has been established by Brahmos Missile Company (joint venture by DRDO and Russia). Prof. Jagadeesh is entrusted with the challenging task of formulating and building this new research initiative. May The Holy Trio bless him to accomplish this task most fruitfully! Prof. Jagadeesh is an alumnus of Vidyashala belonging to the batch 1978 – 82.



S Shishir Poonacha

## Excellent Performance in CAT

Shishir Poonacha S (Batch: 2003 – 2006) has secured 99.41 percentile in CAT 2010 examination and has got admission to the Indian Institute of Management, Lucknow. After completing his X standard examination from Vidyashala in 2006, he graduated in B.Com. in 2011 from Sri Bhagavan Mahaveer Jain college, V V Puram. Bangalore and he was adjudged the 'Best Outgoing Student for the year 2010 – 2011'. Our hearty congratulations to him!

# VIDYASHALA NEWS

## Students' Council Inaugurated



*The Students' Council of Vidyashala*

The Students' Council of Vidyashala for the year 2011 - 2012 was inaugurated on 29th June 2011 by Sri B B Varma, the Divisional Railway Manager, South Western Railway, Mysore Division, Mysore The office-bearers were also administered the oath of office by Sri S Balaji, Principal. Revered Swami Muktidanandaji Maharaj, Adhyaksha, Sri Ramakrishna Ashrama, Mysore, presented the office-bearers with badges marking their induction into their respective offices. Recitations and Bhajans by vidyashala students on the occasion were impressive.

## Our Alumnus Inaugurates the Aquatic Meet 2011




*Our Alumnus Inaugurates the Aquatic Meet 2011*

The 55th annual aquatic meet was inaugurated at the Vidyashala swimming pool on 24th September 2011 by our alumnus Sri Karuturi Sai Ramakrishna (batch: 1979 – 83), Managing Director, Karuturi Global Ltd., Bangalore, after an attractive display of pyramids and formations in the pool. Chi. Tejas K I, Bharath A S and Santosh S emerged as champions In PUC , Senior and Junior sections respectively.

Chi. Ajay Raj created a new record in Diving while in the Senior section Bharath A S created as many as four new records in 100 Mts FreeStyle, 100 Mtrs. Butterfly, 400 Mts. FreeStyle and 800 Mts. FreeStyle General Events breaking the earlier ones, created also by a single swimmer, Chi. Shreyank P Swamy in 2006 – 2007. Incidentally he was present to honour the breaker of his own record! Our hearty congratulations to all of them!



## Kannada Rajyotsava

ವಿದ್ಯಾಶಾಲೆಯಲ್ಲಿ ಕನ್ನಡ ರಾಜ್ಯೋತ್ಸವವನ್ನು ದಿನಾಂಕ 9 ನವೆಂಬರ್, 2011 ರಂದು ಶ್ರದ್ಧೆಯಿಂದ ಆಚರಿಸಲಾಯಿತು. ನಾಡೋಜ ಪ್ರೊ. ಹಂ. ಪ. ನಾಗರಾಜಯ್ಯ ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷರು, ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು ವಿದ್ಯಾರ್ಥಿಗಳ ವಾದ್ಯವೃಂದ, ಕಿರುನಾಟಕ 'ಭೀಷ್ಮ ಪ್ರತಿಜ್ಞೆ' ಕಾರ್ಯಕ್ರಮಗಳು ಪ್ರೇಕ್ಷಕರ ಮನಸೂರೆಗೊಂಡವು.

## OBFC Games Meet



*Annual OBFC Games Meet*

The annual OBFC Games Meet for the old students residing in Mysore and nearby places was held on 6th November 2011 at the Vidyashala playgrounds. More than fifty alumni participated in the meet enthusiastically. Six friendly matches were played against the present students. While the results went in favour of OBA in Football, the youngsters proved better in Cricket, Badminton, Table tennis Basketball and Volleyball. Congratulations to both the teams!

A notable feature of the cricket match was that Rev. Swami Satyeshanandaji Maharaj, Correspondent, SRKVS, also our alumnus (batch: 1979 -81 PUC ) represented the OBA and offered a tough fight by scoring 41 not out off 25 balls!

## Science Day at Vidyashala




*Science Day at Vidyashala*

Science Day was observed in Vidyashala on 12th November 2011 as a part of which a science exhibition was arranged in which prize-winning science models prepared by students were exhibited. Sri K R Sridhara Murthy, Senior Expert Advisor to the Prime Minister in Public Information and Infra Structure & Innovations in India, Bangalore, was the Chief Guest. Prof. Jagadeesh, The Chairman of Centre of Excellence in High Speed Aero Dynamics in IISc, Bangalore, who is also our alumnus (batch 1979 – 82) was the Guest of Honour. Revered Swami Muktidanandaji Maharaj, Adhyaksha of Ramakrishna Ashrama, Mysore, presided over the function. Revered Swami Satyeshanandaji Maharaj, Correspondent and Sri S Balaji, Principal, graced the occasion. They went round the exhibition and appreciated the exhibits. All the toppers in Science in the Vidyashala first term examination were awarded certificates and prizes.

## Annual Athletic Meet



*59th Annual Athletic Meet Inauguration*

The 59th annual athletic meet of Vidyashala was inaugurated by Sri P S Vastrad I A S, Deputy Commissioner, Mysore District, Mysore, on 25th November 2011. The students turned out a smart march past and put up an impressive field display of band, gymnastics, exercises on parallel bars, pyramids, yogasanas and aerobics. Chi. Nihal Ganapathy, Sourav Ranjan and Shashank S emerged as champions in the PUC, Seniors and Juniors sections respectively. They are seen in the picture (*left*) along with the Chief guest of the closing ceremony Dr. Chandrashekar, Chief Administrator, Aditya Hospital, Mysore.




Chi. Ahish Krishna of II PUC created a new record in the Discus Throw event in the PUC Section. Our hearty congratulations!